/

# ವಾರ್ಡ್ ಸಂಖ್ಯೆ : 190 (ಮಂಗಮ್ಮನಪಾಳ್ಯ)

## Ward Committee

ದಿನಾಂಕ: 01.11.2022

| ಕ್ರಮ ಸಂಖ್ಯೆ | ವಾರ್ಡ್ ಸದಸ್ಯರು, ಕಲ್ಯಾಣ ಸಂಘಗಳ ಪ್ರತಿನಿಧಿಗಳು ಮತ್ತು ಸಾರ್ವಜನಿಕರ ಹೆಸರು ಮತ್ತು ವಿಳಾಸ | ದೂರವಾಣಿ / ಮೊಬೈಲ್ ಸಂಖ್ಯೆ | ಸಹಿ |
|---|---|---|---|
| 1 | N.T. Malthew M. Nagaraja | 9900134752 | [signature] |
| 2 | Gopinath. K | 9243111520 | [signature] |
| 3 | [signature] | 990038807 | [signature] |
| 4 | T.A. MOULASAB | 9900034140 | [signature] |
| 5 | | | |
| 6 | | | |
| 7 | | | |
| 8 | | | |
| 9 | | | |
| 10 | | | |
| 11 | | | |
| 12 | | | |
| 13 | | | |
| 14 | | | |
| 15 | | | |

Scanned with

ವಾರ್ಡ್ ಸಂಖ್ಯೆ : 190 (ಮಂಗಮ್ಮನಪಾಳ್ಯ)

# Ward Committee

ದಿನಾಂಕ 07.11.2022

| ಕ್ರಮ ಸಂಖ್ಯೆ | ವಾರ್ಡ್ ಅಧಿಕಾರಿಗಳ ಹೆಸರು & ಹುದ್ದೆ | ದೂರವಾಣಿ / ಮೊಬೈಲ್ ಸಂಖ್ಯೆ | ಸಹಿ |
|---|---|---|---|
| 1 | VIKAS. D.S BWSSB | 9845444039 | [signature] |
| 2 | S.G. ನಾರಾಯಣಪ್ಪ - ತೋಟಗಾರಿಕೆ | 9739063779 | |
| 3 | S.L. paps Reddy AEE BWSSB | 98459 88380 | [signature] |
| 4 | Hanumantharaya Nodal officer | 8105005285 | [signature] |
| 5 | N. Rajagopala Babu | 9480688190 | N. Rajagopala Babu |
| 6 | K.K. Mandappa Bandepalya P.S | 9916742606 | [signature] |
| 7 | Pradeep. M (Forest Dept) | 7676921529 | Pradeep. M |
| 8 | Ramachandra ARO | 9480685984 | [signature] 7/11/22 |
| 9 | | | |
| 10 | | | |
| 11 | | | |
| 12 | | | |
| 13 | | | |
| 14 | | | |
| 15 | | | |

Scanned with

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190-ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ (ಬೃಹತ್ ಮಳೆನೀರುಗಾಲುವೆ) ರವರು ದಿನಾಂಕ: 07.11.2022 ಸೋಮವಾರ ಮಧ್ಯಾಹ್ನ 3.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 190ರ ಹೆಚ್.ಎಸ್.ಆರ್ ಉಪವಿಭಾಗ (ವಾರ್ಡ್ ಕಛೇರಿ) 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102.ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190-ಮಂಗಮ್ಮನಪಾಳ್ಯ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ, ಸ.ಕಾ.ನಿ.ಅ (ಬೃಹತ್ ಮಳೆನೀರುಗಾಲುವೆ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ/ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಎಸ್.ಎಲ್ ಪಾಪ್ಪರೆಡ್ಡಿ | ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳ ವಿಭಾಗ | 9845988386 |
| 4 | ಶ್ರೀ ಎನ್.ಜೆ ಮ್ಯಾಥ್ಯೂ | ಮುನೇಶ್ವರ ನಗರ, ಕಲ್ಯಾಣ ಸಂಘ | 9900134754 |
| 5 | ಶ್ರೀ ಗೋಪಿನಾಥ್ | ಸದಸ್ಯರು | 9243111520 |
| 6 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು | 9900388075 |
| 7 | ಶ್ರೀ ಟಿ.ಎ ಮೌಲಸಾಬ್ | ಸಾರ್ವಜನಿಕರು | 990034140 |
| 8 | ಶ್ರೀ ವಿಕಾಸ್ ಡಿ. ಎಸ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | 9845444039 |
| 9 | ಶ್ರೀ ರಾಮಚಂದ್ರ | ಸ.ಕಂ.ಅ. ಹೆಚ್.ಎಸ್.ಆರ್ ಉಪವಿಭಾಗ | 9480685984 |
| 10 | ಶ್ರೀ ಕೆ.ಕೆ. ಮಂದಪ್ಪ | ಪೋಲಿಸ್ ಇನ್ಸ್‌ಪೆಕ್ಟರ್, ಬಂಡೇಪಾಳ್ಯ | 9916742606 |
| 11 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು | 9844629911 |
| 12 | ಶ್ರೀ ಹೊನ್ನೂರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಸಂ.190 | 9480688490 |
| 13 | ಶ್ರೀ ಸಂದೀಪ | ಅರಣ್ಯ ನಿರೀಕ್ಷಕರು | 7676921529 |
| 14 | ಶ್ರೀ ಎಸ್.ಜಿ ನಾರಾಯಣಪ್ಪ | ತೋಟಗಾರಿಕೆ ನಿರೀಕ್ಷಕರು | 9739063379 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಗೆ ಸಹಾಯಕ ನಿರ್ದೇಶಕರು ಪಶುಸಂಗೋಪನೆ, ಬೃಹತ್ ಮಳೆ ನೀರುಗಾಲುವೆ ಸ.ಕಾ.ಅ., ಕಂದಾಯ ನಿರೀಕ್ಷಕರು ರಾಜಸ್ವ ಇಲಾಖೆ, ಸಹಾಯಕ ಅಭಿಯಂತರರು, ಬೀದಿ ದೀಪ ನಿರ್ವಹಣೆ (ವಿದ್ಯುತ್) ರವರುಗಳು ಸಭೆಗೆ ಗೈರು ಹಾಜರಾಗಿರುವ ಸದಸ್ಯರು ಸಭೆಯಲ್ಲಿ ಆಕ್ಷೇಪಿಸಿದ್ದು, ನೋಡಲ್ ಅಧಿಕಾರಿಗಳು ಕಾರಣ ಕೇಳ ನೋಟೀಸ್ ಜಾರಿ ಮಾಡುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿ, ಸಭೆಯನ್ನು ಆರಂಭಿಸಲಾಯಿತು.



Scanned with

- **ಕಂದಾಯ ಇಲಾಖೆ :-**

1. ಹಿಂದಿನ ಸಭೆಯ ದಿನಾಂಕ: 17.09.2022 ರಂದು ಸರ್ವೆ ಸಂ. 45/1, ಬಂಡೇಪಾಳ್ಯ, ಗಾರ್ವೆಭಾವಿಪಾಳ್ಯ, ರಾಜುಕಾಲುವೆ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಿರುವ ಬಗ್ಗೆ ಶ್ರೀ ಟಿ.ಎ ಮೌಲಸಾಬ್ ರವರು ಪ್ರಸ್ತಾಪಿಸಿದರು. ಇಂದಿನ ಸಭೆಯಲ್ಲಿ ಹಾಜರಿದ್ದ ಶ್ರೀ ಪಾಪ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ಬೊ.ವಿ. ರವರು ಈ ಬಗ್ಗೆ ಸೂಕ್ತ ಕ್ರಮಕ್ಕಾಗಿ ತಹಶೀಲ್ದಾರ್ ರವರಿಗೆ ಪತ್ರ ಬರೆಯಲು ಸಹಾಯಕ ಕಂದಾಯ ಅಧಿಕಾರಿಗಳು (ಹೆಚ್.ಎಸ್.ಆರ್) ರವರಿಗೆ ತಿಳಿಸಿರುತ್ತಾರೆ.

- **ಬೃಹತ್ ಮಳೆ ನೀರುಗಾಲುವೆ :-**

1. ಹಿಂದಿನ ಸಭೆಯ ದಿನಾಂಕ: 17.09.2022 ರಂದು ರಾಜುಕಾಲುವೆಯಲ್ಲಿ ಹೂಳು ತುಂಬಿದ್ದು, ಇದರಿಂದ ಮಳೆ ನೀರು ಸರಾಗವಾಗಿ ಹರಿಯದೆ ಮನೆಗಳಿಗೆ ನುಗ್ಗಿ ಹಾನಿಯಾಗುತ್ತಿದ್ದು ರಾಜುಕಾಲುವೆಗಳಲ್ಲಿ ಹೂಳೆತ್ತಲು ಚರ್ಚಿಸಿದ್ದು, ಇಂದಿನ ಸಭೆಗೆ ಸಹಾಯಕ.ಅಭಿಯಂತರರು ಶ್ರೀ ವಿಕ್ರಾಂತ್ ರವರು ಗೈರು ಹಾಜರಾಗಿದ್ದು, ಈ ಬಗ್ಗೆ ಸಭೆಯಲ್ಲಿ ಸದಸ್ಯರು ಆಕ್ಷೇಪಿಸಿದ್ದು, ನೋಡಲ್ ಅಧಿಕಾರಿ/ಅಧ್ಯಕ್ಷರು ರವರು ಸದರಿಯವರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ 03 ದಿನಗಳೊಳಗಾಗಿ ಉತ್ತರಿಸುವಂತೆ ಕಾರ್ಯದರ್ಶಿ ರವರಿಗೆ ಸೂಚಿಸಿದರು.

- **ಬೆಸ್ಕಾಂ :-**

1. ವಾರ್ಡ್ ವ್ಯಾಪ್ತಿಯ ಉಜಾಲಾ ಫ್ಯಾಕ್ಟರಿ ಹತ್ತಿರ, ರಸ್ತೆ ಅಗಲೀಕರಣಕ್ಕಾಗಿ ಜಾಗ ಬಿಟ್ಟಿದ್ದು, ಈ ಜಾಗದಲ್ಲಿ ವೆಟ್‌ಮಿಕ್ಸ್ ಹಾಕಲು ಬಿಬಿಎಂಪಿ ರವರಿಗೆ ತಿಳಿಸಿದ್ದು, ಬಿಬಿಎಂಪಿ ಕಾಮಗಾರಿ ವಿಭಾಗದಿಂದ ರಸ್ತೆ ಬದಿಗಳಲ್ಲಿರುವ ಕಂಬಗಳನ್ನು ತೆರವುಗೊಳಿಸುವಂತೆ ಬೆಸ್ಕಾಂ ಇಲಾಖೆಗೆ ಪತ್ರ ಬರೆದಿರುವ ಬಗ್ಗೆ ಸಭೆಯಲ್ಲಿ ಮೌಲಸಾಬ್ ರವರು ಪ್ರಸ್ತಾಪಿಸಿದ್ದು, ಶೀಘ್ರದಲೇ ಕಂಬಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ಇಂದಿನ ಸಭೆಗೆ ಬೆಸ್ಕಾಂ ಇಲಾಖೆ ಸ.ಕಾ.ಅ ಅಥವ ಸಹಾಯಕ ಅಭಿಯಂತರರು ರವರುಗಳು ಸಭೆಗೆ ಗೈರು ಹಾಜರಾಗಿದ್ದು, ದೂರವಾಣಿ ಮುಖಾಂತರ ಸಂಪರ್ಕಿಸಿ ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿ/ ಅಧ್ಯಕ್ಷರು ರವರು ಸೂಚಿಸಿದರು.

- **ತೋಟಗಾರಿಕೆ :-**

1. ವಾರ್ಡ್ ವ್ಯಾಪ್ತಿಯ ಮಂಗಮ್ಮನಪಾಳ್ಯ ವ್ಯಾಪ್ತಿಯ ಐ.ಟಿ.ಐ ಉದ್ಯಾನವನವನ್ನು ಅಭಿವೃದ್ಧಿ ಪಡಿಸುವಂತೆ ಹಾಗೂ ಉದ್ಯಾನವನದ ಭದ್ರತಾ ಸಿಬ್ಬಂದಿ ರವರಿಗೆ ಶೌಚಾಲಯ ಸೌಲಭ್ಯವಿಲ್ಲದಿರುವುದರಿಂದ E-Toilet ಅಥವ ಶೌಚಾಲಯ ನಿರ್ಮಿಸಲು ಗೋಪಿನಾಥ ರವರು ಪ್ರಸ್ತಾಪಿಸಿದರು. ಈ ಬಗ್ಗೆ ಇಂದಿನ ಸಭೆಗೆ ತೋಟಗಾರಿಕೆ ನಿರೀಕ್ಷಕರು ರವರು ಗೈರು ಹಾಜರಾಗಿದ್ದು, ಕಾ.ಪಾ.ಅ. (ಬೊ.ವಿ) ರವರು ಮಾತನಾಡುತ್ತಾ, ಭದ್ರತಾ ಸಿಬ್ಬಂದಿ ರವರಿಗೆ ಶೌಚಾಲಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ಹಾಗೂ ಐ.ಟಿ.ಐ ಉದ್ಯಾನವನನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

- **ರಾಜಸ್ವ ಇಲಾಖೆ :-**

1. ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಿರುವ ವಿಷಯಗಳನ್ನು ಇಂದಿನ ಸಭೆಯಲ್ಲಿ ಪ್ರಸ್ತಾಪಿಸಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸರ್ವೆ ಸಂಖ್ಯೆ: 43 ಬಂಡೇಪಾಳ್ಯ 3 ಎಕರೆ ಜಾಗದಲ್ಲಿ ಕೆಲವು ಖಾಸಿಗೆ ವ್ಯಕ್ತಿಗಳು ಕಾಂಪೌಂಡ್ ಗೋಡೆ ನಿರ್ಮಿಸಿದ್ದು, ಇದರ ಪೈಕಿ 1 ಎಕರೆ ಶ್ರೀ ರಾಮ ದೇವಸ್ಥಾನ ನಿರ್ಮಿಸಲು ಮೀಸಲಿಟ್ಟಿರುವ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದು, ಈ ಜಾಗವನ್ನು ಹದ್ದುಬಸ್ತು ಮಾಡಲು ಶ್ರೀ ಮೌಲಸಾಬ್ ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಇಂದಿನ ಸಭೆಗೆ ರಾಜಸ್ವ ಇಲಾಖೆ ಅಧಿಕಾರಿಗಳು ಗೈರ್ ಹಾಜರಾಗಿದ್ದು ನೋಡಲ್ ಅಧಿಕಾರಿಗಳು ಸದರಿಯವರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.

- **ಸಂಚಾರಿ ವಿಭಾಗ (ಎಲೆಕ್ಟ್ರಾನಿಕ್ ಸಿಟಿ ಪೋಲಿಸ್ ಠಾಣೆ) :-**

1. ವಾರ್ಡ್ ವ್ಯಾಪ್ತಿಯ ಬಂಡೇಪಾಳ್ಯ ಮುಖ್ಯ ರಸ್ತೆ ಹಾಗೂ ಮಂಗಮ್ಮನಪಾಳ್ಯ ಕೆರೆ ರಸ್ತೆಗಳ ಎರಡು ಬದಿಗಳಲ್ಲಿ ದೊಡ್ಡ ಕಂಟೇನರ್‌ಗಳನ್ನು ಹಾಗೂ ನಾಲ್ಕು ಚಕ್ರ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ಸಂಚಾರ ದಟ್ಟಣೆಯಾಗುತ್ತಿರುವುದಾಗಿ ಶ್ರೀ ಎನ್.ಜೆ ಮ್ಯಾಥ್ಯೂ ರವರು ಸಭೆಗೆ ತಿಳಿಸಿದರು. ಈ ಬಗ್ಗೆ ಇಂದಿನ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಗೈರ್ ಹಾಜರಾಗಿರುತ್ತಾರೆ.

- **ಬೀದಿ ದೀಪ (ವಿದ್ಯುತ್) :-**

1. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ತಿಳಿಸಿ ಸಂಜೆ ವೇಳೆ 6.00 ಗಂಟೆ ನಂತರ ಅವಶ್ಯಕವಿರುವ ಸ್ಥಳದಲ್ಲಿ ಆದ್ಯತೆ ಮೇರೆಗೆ ಬೀದಿ ದೀಪಗಳನ್ನು ಅಳವಡಿಸಲು ಶ್ರೀ ಗೋಪಿನಾಥ ರವರು ಸಭೆಗೆ ತಿಳಿಸಿದರು.

(3.....)

Scanned with

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ, ಸಾರ್ವಜನಿಕರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with